**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಹುಮನಾಬಾದ.**

ದಿನಾಂಕ: 02-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ: 02

| | | |
|---|---|---|
| ಹೆಸರು | :: | ಡಾ.ಕೀಶೋರ ಮೆಹಂಗಜಿ |
| ತಂದೆಯ ಹೆಸರು | :: | ಸದಾನಂದ |
| ವಯಸ್ಸು | :: | 62-ವರ್ಷ |
| ಉದ್ಯೋಗ | :: | ವೈದ್ಯಕೀಯ ವೃತ್ತಿ |
| ವಾಸಸ್ಥಳ | :: | ಕಲಬುರಗಿ |

**<u>ಸಾಕ್ಷಿಯ ಮುಖ್ಯ ವಿಚಾರಣೆ : ಅರ್ಜಿದಾರರ ಪರಶ್ರೀ ಎಸ್ಎಂ.ಆರ ವಕೀಲರಿಂದ</u>**

ನಾನು 1991 ರಿಂದ ಮೂಳೆ ಮುರಿತದ ತಜ್ಞ ವೈದ್ಯನೆಂದು ಸೇವೆ ಸಲ್ಲಿಸುತ್ತಿದ್ದೇನೆ. ದಿ.06-10-2025 ರಂದು ನದೀಮ ತಂದೆ ಮಹ್ಮದ ಮಜೀದ್ ಇತ ಹಾಜರಾಗಿ ಅಂಗ ನ್ಯೂನ್ಯತೆ ಪ್ರಮಾಣ ಪತ್ರ ನೀಡುವಂತೆ ವಿನಂತಿಸಿದಾಗ ಆತನಿಗೆ ಸಂಬಂಧಪಟ್ಟ ಗಾಯದ ಪ್ರಮಾಣ ಪತ್ರ ಹಾಗೂ ಆಸ್ಪತ್ರೆಯ ಬಿಡುಗಡೆ ಪತ್ರ ಅವಲೋಕಿಸಿ ಆತನನ್ನು ಪರೀಕ್ಷಿಸಿ, ಕ್ಷ-ಕಿರಣ ತೆಗೆಸಿ ಪರಿಶೀಲಿಸಿದಾಗ ಆತನ ಎಡಗಾಲಿನ ಹಿಮ್ಮಡಿ ಬಳಿ fibula fracture ಆಗಿದ್ದು ಕಂಡುಬಂದಿರುತ್ತದೆ. ಆತನನ್ನು ಪರೀಕ್ಷಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1. Moderate degree restriction of left ankle
2. Partial difficulty to squat and sit
3 Grade II degree pain at ankle on exertion

ಈ ಕೆಳಕಂಡ ಗಾಯಗಳ ಒಟ್ಟಾರೆ ನ್ಯೂನ್ಯತೆಯನ್ನು ನಿಯಮಾನುಸಾರ ಲೆಕ್ಕ ಹಾಕಲು ಎಡಭಾಗದ ಕೆಳಗಿನ ಭಾಗದಲ್ಲಿ 22% ನ್ಯೂನ್ಯತೆ ಕಂಡುಬಂದಿರುತ್ತದೆ. ಈ ಕುರಿತು ಗಾಯದ ನ್ಯೂನ್ಯತೆ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ನ್ಯೂನ್ಯತೆ ಪ್ರಮಾಣ ಪತ್ರ ಹಾಗೂ ನ್ಯೂನ್ಯತೆ

ಗುರುತಿಸುವಲ್ಲಿ ಅನುಸರಿಸಿದ ಕೊಷ್ಟಕವನ್ನು, ಎಕ್ಸರೆ ವರದಿ ಮತ್ತು ಎಕ್ಸರೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ-16 ರಿಂದ 19 ಎಂದು ಗುರುತಿಸಿದ್ದು, ನಿ.ಪಿ16(ಎ) ಎಂದು ಗುರುತಿಸಲಾಯಿತು.

ಅರ್ಜಿದಾರ ಪ್ಲಂಬಿಂಗ ಕೆಲಸ ಮಾಡುತ್ತಿದ್ದು, ಅವನಿಗಾದ ಗಾಯದ ತೊಂದರೆಯು ಆತ ಮಾಡುವ ಕೆಲಸಕ್ಕೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂದರೆ ಸಾಕ್ಷಿ ಬಹಳ ಹೊತ್ತು ನಿಂತು ಕೆಲಸ ಮಾಡಲು ಆಗುವುದಿಲ್ಲ ಹಾಗೂ ಮಂಡಿಮೇಲೆ ಕುಳಿತುಕೊಂಡು ಹಾಗೂ ಕ್ರಾಸ ಲೆಗ್ ಮಾಡಿ ಕುಳಿತುಕೊಳ್ಳಲು ಆಗುವುದಿಲ್ಲ, ಕಾರಣ ಸದರಿ ನ್ಯೂನ್ಯತೆ ಆತನ ಪ್ಲಂಬಿಂಗ ಕೆಲಸಕ್ಕೆ ತೊಂದರೆ ಆಗುತ್ತದೆ ಎಂದು ಹೇಳುತ್ತಾರೆ.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಆರ್.ಜಿ ರವರಿಂದ :</u>**

ಅರ್ಜಿದಾರನ ಎಡಗಾಲಿನ ಹಿಮ್ಮಡಿ ಬಳಿ ಆದ ಮೂಳೆ ಮುರಿತದ ಗಾಯ ಆತ ಕಾಲನ್ನು ಚಲನೆ ಮಾಡಿದಾಗಲೆಲ್ಲಾ ನೋವು ಬರುತ್ತದೆ. ಹುಮನಾಬಾದನ ಹೈಟೆಕ್ ಆಸ್ಪತ್ರೆಯ ಚಿಕಿತ್ಸೆ ವರದಿ ಅರ್ಜಿದಾರ ತೋರಿಸಿರುತ್ತಾನೆ. ಅರ್ಜಿದಾರನಿಗಾದಂತಹ ಮೂಳೆ ಮುರಿತದ ಗಾಯವಾದಾಗ ತಕ್ಷಣ ಶಸ್ತ್ರ ಚಿಕಿತ್ಸೆಗೆ ಸಲಹೆ ನೀಡುತ್ತೇವೆ ಎಂದರೆ ಸರಿ.

ನ್ಯೂನ್ಯತೆ ಪ್ರಮಾಣ ಪತ್ರ ನೀಡುವಾಗ ವ್ಯಕ್ತಿಯ ಕೆಲಸವನ್ನು ಗಮನದಲ್ಲಿಟ್ಟುಕೊಂಡು ನೀಡುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರ ಪ್ಲಂಬಿಂಗ ಕೆಲಸ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ. ಅರ್ಜಿದಾರನ ವೃತ್ತಿಯ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎಂದು ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಮೂಳೆ ಮುರಿತದ ಗಾಯ ಕ್ಷ-ಕಿರಣ ಮಾಡಿದಾಗ ಮಾತ್ರ ಗೊತ್ತಾಗುತ್ತದೆ ಎಂದರೆ ಸರಿ.

ಅರ್ಜಿದಾರನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ಬಗ್ಗೆ ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ದಿ.06-08-2023 ರಿಂದ 23-08-2023 ರವರೆಗಿನ ಚಿಕಿತ್ಸೆ ಪಡೆದ ದಾಖಲೆಗಳನ್ನು ಪರಿಶೀಲಿಸಿದ್ದಿರಾ ಎಂದರೆ ಸಾಕ್ಷಿ ವೈದ್ಯರ ಚೀಟಿಗಳನ್ನು ಹಾಜರುಪಡಿಸಿದ್ದ ಎಂದು ಹೇಳುತ್ತಾರೆ. ಅರ್ಜಿದಾರ ನನ್ನ ಬಳಿ ಚಿಕಿತ್ಸೆ ಪಡೆದಿಲ್ಲ. ಪೂರ್ಣ ದೇಹಕ್ಕೆ ಎಷ್ಟು ಪ್ರಮಾಣದ ನ್ಯೂನ್ಯತೆ ಇದೆ

ಎಂದು ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆ ನ್ಯೂನ್ಯತೆ ಇರದ ಹೊರತು ಪೂರ್ಣ ದೇಹಕ್ಕೂ ಸಹ ಶೇ 22% ರಷ್ಟು ನ್ಯೂನ್ಯತೆ ಇದೆ ಎಂದು ಪರಿಗಣಿಸಬೇಕಾಗುತ್ತದೆ ಎಂದು ಹೇಳುತ್ತಾರೆ.

ನ್ಯೂನ್ಯತೆ ಲೆಕ್ಕ ಹಾಕುವಾಗ ಸಂಪೂರ್ಣ ದೇಹವನ್ನು upper limb, lower limb and trunk ಎಂದು ಮೂರು ಭಾಗಗಳಲ್ಲಿ ವಿಂಗಡಿಸಲಾಗುತ್ತದೆ. Left lower limb ಕುರಿತಾಗಿ 22% ನ್ಯೂನ್ಯತೆ ಕುರಿತು ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿ. ನಾನು ನೀಡಿದ ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ತಿಳಿಸಿದ ಶೇಕಡಾವಾರು ನ್ಯೂನ್ಯತೆಯನ್ನು ಮೂರರಿಂದ ಭಾಗಿಸಿದರೆ ಸಂಪೂರ್ಣ ದೇಹಕ್ಕೆ ನೀಡುವ ನ್ಯೂನ್ಯತೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರ ಚಿಕಿತ್ಸೆಯ ಯಾವುದೇ ದಾಖಲೆಗಳನ್ನು ತಂದಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಹೆಚ್ಚಿನ ಪರಿಹಾರ ಧನ ಕೊಡಿಸಲು ಆತನ ಕೋರಿಕೆ ಮೇರೆಗೆ ಸುಳ್ಳು ಲೆಕ್ಕ ಮಾಡಿ ನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದಿರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫಸಿ ಹುಮನಾಬಾದ.